ಸಮಾಚಾರ ಸಣ್ಣದಲ್ಲ

ಇಂಧನ ಬೆಲೆ ಹೆಚ್ಚಳ ವಿರುದ್ಧ ಧ್ವನಿ ಎತ್ತಿ: ರಾಹುಲ್ ಗಾಂಧಿ

ದೆಹಲಿ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಇಂಧನ ಬೆಲೆ ಹೆಚ್ಚಳದ ವಿರುದ್ಧ ಮಾತನಾಡಿ ಅಭಿಯಾನ ನಡೆಸಬೇಕು ಎಂದು ಜನರನ್ನು ಒತ್ತಾಯಿಸಿ ದ್ದಾರೆ. ಮೈಕ್ರೋ ಬ್ಲಾಗಿಂಗ್ ಸೈಟ್ ಟ್ವಿಟ್ಟರ್‌ನಲ್ಲಿ ಸೋಮವಾರ ಪೋಸ್ಟ್ ಮಾಡಿರುವ ವಿಡಿಯೊ ಮೂಲಕ ಅವರು ಜನರಲ್ಲಿ ಮನವಿ ಮಾಡಿ ದ್ದಾರೆ. ಕರೋನಾ ವೈರಸ್ ಸಾಂಕ್ರಾಮಿಕ ಮತ್ತು ಚೀನಾ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರವು ಜನರನ್ನು ತಮ್ಮಿಚ್ಛೆಯಂತೆ ಬಿಟ್ಟಿದೆ. ಸತತ 21 ದಿನಗಳವರೆಗೆ ಇಂಧನ ಬೆಲೆಯನ್ನು ಹೆಚ್ಚಿಸುವ ಮೂಲಕ ಕೇಂದ್ರವು ಜನರನ್ನು ಲೂಟಿ ಮಾಡುತ್ತಿದೆ. ಹೆಚ್ಚಿದ ಬೆಲೆಗಳನ್ನು ಹಿಂತೆಗೆದುಕೊಳ್ಳುವಂತೆ ಸರಕಾರವನ್ನು ಒತ್ತಾಯಿಸಲು ನಾವು ಧ್ವನಿ ಎತ್ತೋಣ. ಇಂಧನ ಬೆಲೆ ಏರಿಕೆ ವಿರುದ್ಧ ನಿಮ್ಮ ಸಾಮಾಜಿಕ ಮಾಧ್ಯಮ ಹ್ಯಾಂಡಲ್‌ಗಳಲ್ಲಿ ವಿಡಿಯೊಗಳನ್ನು ಪೋಸ್ಟ್ ಮಾಡಿ ಎಂದು ತಮ್ಮ ವಿಡಿಯೊದಲ್ಲಿನ ವಾಯ್ಸ್‌ಓವರ್ ಹೇಳಿದ್ದಾರೆ.

ಇಂಧನ ಬೆಲೆ ಏರಿಸಿ ಸುಲಿಗೆ



ದೆಹಲಿ: ರಾಷ್ಟ್ರವ್ಯಾಪಿ ಲಾಕ್‌ಡೌನ್ ನಂತರ 22 ಬಾರಿ ಇಂಧನ ಬೆಲೆ ಹೆಚ್ಚಿಸಿ ಜನರನ್ನು ಸುಲಿಗೆ ಮಾಡುತ್ತಿದೆ ಎಂದು ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ತಕ್ಷಣವೇ ಬೆಲೆ ಏರಿಕೆ ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದಾರೆ. ಜನರ ಮೇಲೆ ಬೆಲೆ ಏರಿಕೆ ಭಾರ ಹೊರಿಸಿ ಸರಕಾರ ಲಾಭ ಮಾಡಿಕೊಳ್ಳುತ್ತಿದೆ. ಆರ್ಥಿಕ ಬಿಕ್ಕಟ್ಟಿನ ಈ ಸಮಯದಲ್ಲಿ ಅವರಿಗೆ ಸಹಾಯ ಮಾಡುವ ಬದಲು, ಅವರು ಕಷ್ಟಪಟ್ಟು ಸಂಪಾದಿಸಿದ ಹಣದಿಂದ ಸರಕಾರ ಲಾಭ ಗಳಿಸುತ್ತಿದೆ ಎಂದಿದ್ದಾರೆ. ದೇಶಾದ್ಯಂತ ಕಾಂಗ್ರೆಸ್‌ನ ಇಂಧನ ಬೆಲೆ ಹೆಚ್ಚಳ ಧ್ವನಿ ಎತ್ತಿ ಅಭಿಯಾನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಒಂದೆಡೆ, ಕರೋನಾ ಸಾಂಕ್ರಾಮಿಕ ರೋಗ ಹಾನಿಗೊಳಿಸುತ್ತಿದೆ. ಮತ್ತೊಂದೆಡೆ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಜನಜೀವನವನ್ನು ಮತ್ತಷ್ಟು ಸಂಕಷ್ಟದೆಡೆಗೆ ದೂಡುತ್ತಿದೆ ಎಂದು ಹೇಳಿದ್ದಾರೆ.

ಮಧ್ಯಪ್ರದೇಶ: ಸಚಿವ ಸಂಪುಟ ವಿಸ್ತರಣೆ ಇಂದು

ಭೋಪಾಲ್: ಮಧ್ಯಪ್ರದೇಶ ಸಚಿವ ಸಂಪುಟ ವಿಸ್ತರಣೆ ಜೂ.30 ರೊಳಗೆ ಪೂರ್ಣಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ. ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಸೋಮವಾರ ಸಂಜೆ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು ಎಂದು ಮೂಲಗಳು ತಿಳಿಸಿವೆ. ಚೌಹಾಣ್ ನಾಲ್ಕನೇ ಬಾರಿಗೆ ಮಧ್ಯಪ್ರದೇಶದ ಮುಖ್ಯಮಂತ್ರಿಯಾದ ನಂತರ ಮೂರು ತಿಂಗಳಲ್ಲಿ ಇದು ಅವರ ಮೊದಲ ಅಧಿಕೃತ ಭೇಟಿಯಾಗಿದೆ. ಮಾ.23 ರಂದು, ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ, ಕರೋನಾ ಲಾಕ್‌ಡೌನ್ ಚೌಹಾಣ್‌ಗೆ ಪ್ರಧಾನಿ ಭೇಟಿಯಾಗಲು ಸಾಧ್ಯವಾಗಲಿಲ್ಲ. ಶಿವರಾಜ್ ಸಿಂಗ್ ಚೌಹಾಣ್ ಅವರ ಸಂಪುಟದಲ್ಲಿ ನರೋತ್ತಮ್ ಮಿಶ್ರಾ ಸ್ವೀಕರಿಸಿದ್ದರು.

ದೋಣಿ ದುರಂತ: 23 ಸಾವು

ಢಾಕಾ: ಬಾಂಗ್ಲಾದೇಶದ ಬರಿಬುಂಗಾ ನದಿಯಲ್ಲಿ ಸೋಮವಾರ ಸಂಭವಿಸಿದ ದೋಣಿ ದುರಂತದಲ್ಲಿ 23 ಪ್ರಯಾಣಿಕರು ಮೃತಪಟ್ಟಿದ್ದಾರೆ. ದೋಣಿಯಲ್ಲಿ ಸುಮಾರು 50 ಪ್ರಯಾಣಿಕರಿದ್ದರು. ಮೃತರಲ್ಲಿ ಮೂವರು ಮಕ್ಕಳು, ಆರು ಮಂದಿ ಮಹಿಳೆಯರಿದ್ದಾರೆ. ಕೆಲ ಪ್ರಯಾಣಿಕರು ಈಜಿ ಪಾರಾಗಿದ್ದಾರೆ. ಇನ್ನೂ ಕೆಲವರು ನಾಪತ್ತೆಯಾಗಿದ್ದು, ಅವರಿಗಾಗಿ ಹುಡುಕಾಟ ನಡೆದಿದೆ.

ವಹಿವಾಟು

ಬಿಎಸ್‌ಇ ಸೆನ್ಸೆಕ್ಸ್ 34,961.52	ಬಿಎಸ್‌ಇ ಸೆನ್ಸೆಕ್ಸ್ 10,312.40
ಚಿನ್ನ (10ಗ್ರಾಂ) ₹ 49,900	ಬೆಳ್ಳಿ (ಕೆ.ಜಿಗೆ) ₹ 48,500
ಪೆಟ್ರೋಲ್ (ಪ್ರತಿ ಲೀ) ₹ 82.99	ಡೀಸೆಲ್ (ಪ್ರತಿ ಲೀ) ₹ 76.58
ಅಮೆರಿಕನ್ ಡಾಲರ್ ₹ 75.51	ಇಂಗ್ಲೆಂಡ್ ಪೌಂಡ್ ₹ 92.80

ಟ್ವೀಟು ಖಾರ

ಜೇಮ್ಸ್‌ಮಿಲ್ನರ್
@ JamesMilner

ಮ್ಯಾಂಚೆಸ್ಟರ್ ಸಿಟಿ ತ್ಯಜಿಸಿ ಲಿವರ್‌ಪೂಲ್ ಸೇರಿದಾಗ ಎಲ್ಲರೂ ನನ್ನ ನಿರ್ಧಾರವನ್ನು ಟೀಕಿಸಿದ್ದರು. ಆದರೆ ನಾವೀಗ 30 ವರ್ಷಗಳ ಬಳಿಕ ಪ್ರಶಸ್ತಿ ಜಯಿಸಿದ್ದೇವೆ. ಈಗ ಟೀಕಿಸಿದ್ದವರೆಲ್ಲಾ ನನ್ನನ್ನು ಶ್ಲಾಘಿಸುತ್ತಿದ್ದಾರೆ.

ಟಿಮ್ ಕಾಹಿಲ್
@ Tim_cahill

ಭಾರತೀಯ ಫುಟ್ಬಾಲ್ ಆಟಗಾರರು ಇನ್ನೂ ಹೆಚ್ಚು ಹೆಚ್ಚು ಪಂದ್ಯಗಳಲ್ಲಿ ಭಾಗವಹಿಸಬೇಕು. ಇದರಿಂದ ಫುಟ್ಬಾಲ್ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗುತ್ತದೆ. ಅಂತಾರಾಷ್ಟ್ರೀಯ ಮಟ್ಟದ ಪಂದ್ಯಗಳಲ್ಲಿ ಒತ್ತಡ ನಿರ್ವಹಿಸಲೂ ಇದು ನೆರವಾಗುತ್ತದೆ.

ಇಂಡೋ-ಭೂತಾನ್ ದ್ವಿಪಕ್ಷೀಯ ಆರ್ಥಿಕ ಸಹಕಾರದ ಪ್ರಮುಖ ಆಧಾರಸ್ತಂಭ: ಸಚಿವ ಜೈಶಂಕರ್

ಜಲ ವಿದ್ಯುತ್ ಯೋಜನೆಗೆ ಸಹಿ

ದೆಹಲಿ: ಖೋಲೊಂಗ್ಚು 600 ಮೆಗಾವ್ಯಾಟ್ ಇಂಡೋ-ಭೂತಾನ್ ಜಂಟಿ ಜಲವಿದ್ಯುತ್ ಯೋಜನೆ ಒಪ್ಪಂದಕ್ಕೆ ಸೋಮವಾರ ಸಹಿ ಹಾಕಲಾಗಿದ್ದು, ಇದರ ನಿರ್ಮಾಣ ಮತ್ತು ಇತರ ಸಂಬಂಧಿತ ಕಾರ್ಯಗಳನ್ನು ಪ್ರಾರಂಭಿಸಲು ದಾರಿ ಸುಗಮವಾಗಿದೆ.

ಭೂತಾನ್ ಸರಕಾರ ಮತ್ತು ಖೋಲೊಂಗ್ಚು ಹೈಡ್ರೊ ಎನರ್ಜಿ ಲಿಮಿಟೆಡ್ ನಡುವಿನ ಈ ಯೋಜನೆಯ ಒಪ್ಪಂದಕ್ಕೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹಾಗೂ ಭೂತಾನ್ ಪ್ರತಿನಿಧಿ ತಾಂಡಿ ದೋರ್ಜಿ ಅವರ ಸಮ್ಮುಖದಲ್ಲಿ ಸಹಿ ಹಾಕಲಾಗಿದೆ ಎಂದು ವಿದೇಶಾಂಗ ಸಚಿವಾಲಯದ (ಎಂಇಎ) ಹೇಳಿಕೆ ತಿಳಿಸಿದೆ.

ಒಪ್ಪಂದಕ್ಕೆ ಸಹಿ ಹಾಕುವಿಕೆಯು ಭಾರತ ಮತ್ತು ಭೂತಾನ್ ನಡುವಿನ ಜಲವಿದ್ಯುತ್ ಯೋಜನೆಯ ನಿರ್ಮಾಣ ಮತ್ತು ಇತರ ಕಾರ್ಯಗಳನ್ನು ಪ್ರಾರಂಭಿಸಲು ಸುಲಭವಾಗುತ್ತದೆ. ಈ ಯೋಜನೆಯು 2025ರ ದ್ವಿತೀಯಾರ್ಧದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಸಚಿವಾಲಯ ಹೇಳಿದೆ.

ದೆಹಲಿಯಲ್ಲಿ ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ನಡೆದ ಸಮಾರಂಭದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಸಹಿ ಹಾಕಿದರು.

600 ಮೆಗಾವ್ಯಾಟ್ ರನ್-ಆಫ್-ದಿ-ರಿವರ್ ಯೋಜನೆಯು ಪೂರ್ವ ಭೂತಾನ್‌ನ ಟ್ರಾಶಿಯಾಂಗ್ಟ್ಸೆ ಜಿಲ್ಲೆಯ ಖೋಲೊಂಗ್ಚು ನದಿಯ ಕೆಳಭಾಗದಲ್ಲಿದೆ. ಈ ಯೋಜನೆಯು ನಾಲ್ಕು 150 ಮೆಗಾವ್ಯಾಟ್ ಟರ್ಬೈನ್‌ಗಳ ಭೂಭಾಗದಲ್ಲಿರುವ ವಿದ್ಯುತ್ ಕೇಂದ್ರಕ್ಕೆ 95 ಮೀಟರ್ ಎತ್ತರದ ಕಾಂಕ್ರೀಟ್ ಗುರುತ್ವಾಕರ್ಷಣೆಯ ಅಣೆಕಟ್ಟಿನಿಂದ ನೀರನ್ನು ಹರಿಸಲಾಗುತ್ತದೆ ಎಂದು ಎಂಇಎ ತಿಳಿಸಿದೆ.

ಭೂತಾನ್‌ನ ಡ್ರುಕ್ ಗ್ರೀನ್ ಪವರ್ ಕಾರ್ಪೊರೇಷನ್ (ಡಿಜಿಪಿಸಿ) ಮತ್ತು ಭಾರತದ ಸತ್ಲಜ್ ಜಲ ವಿದ್ಯುತ್ ನಿಗಮ್ ಲಿಮಿಟೆಡ್ (ಎಸ್‌ಜೆವಿಎನ್‌ಎಲ್) ನಡುವೆ ರಚಿಸಲಾಗಿರುವ ಜಂಟಿ ಉದ್ಯಮ ಕಂಪನಿಯಾದ ಖೋಲೊಂಗ್ಚು ಹೈಡ್ರೊ ಎನರ್ಜಿ ಲಿಮಿಟೆಡ್ ಇದನ್ನು ಕೈಗೆತ್ತಿಕೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ನಡೆದ ಸಹಿ ಸಮಾರಂಭದಲ್ಲಿ ಭೂತಾನ್ ಆರ್ಥಿಕ ವ್ಯವಹಾರಗಳ ಸಚಿವ ಲೋಕನಾಥ್ ಶರ್ಮಾ ಮತ್ತು ಭಾರತದ ವಿದೇಶಾಂಗ ಕಾರ್ಯದರ್ಶಿ, ಭಾರತ ಸರಕಾರದ ಕಾರ್ಯದರ್ಶಿ (ಅಧಿಕಾರ), ಭೂತಾನ್‌ನ ಭಾರತದ ರಾಯಭಾರಿ ಮತ್ತು ಭೂತಾನ್ ರಾಯಭಾರಿ ಸೇರಿದಂತೆ ಹಿರಿಯ ಸರಕಾರಿ ಅಧಿಕಾರಿಗಳು ಉಪಸ್ಥಿತರಿದ್ದರು.

ಮಹತ್ವದ ಯೋಜನೆ

ಸಚಿವ ಎಸ್.ಜೈಶಂಕರ್ ಮಾತನಾಡಿ, ಎರಡೂ ದೇಶಗಳ ಪರಸ್ಪರ ಲಾಭದಾಯಕ ದ್ವಿಪಕ್ಷೀಯ ಆರ್ಥಿಕ ಸಹಕಾರದ ಪ್ರಮುಖ ಆಧಾರಸ್ತಂಭವಾಗಿ ಜಲವಿದ್ಯುತ್ ಅಭಿವೃದ್ಧಿ ಮಹತ್ವದ್ದಾಗಿದೆ ಎಂದು ಹೇಳಿದ್ದಾರೆ. 720 ಮೆಗಾವ್ಯಾಟ್ ಮಂಗ್‌ಡೆಚು ಜಲವಿದ್ಯುತ್ ಯೋಜನೆಯನ್ನು ಭಾರತ ಮತ್ತು ಭೂತಾನ್ ಪ್ರಧಾನ ಮಂತ್ರಿಗಳು ಆಗಸ್ಟ್ 2019 ರಲ್ಲಿ ಜಂಟಿಯಾಗಿ ಉದ್ಘಾಟಿಸಿದ್ದರು.

ಪ್ರಮುಖಾಂಶಗಳು

- **600 ಮೆಗಾವ್ಯಾಟ್ ರನ್-ಆಫ್-ದಿ-ರಿವರ್ ಯೋಜನೆ**
- **2025ರ ದ್ವಿತೀಯಾರ್ಧದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ**
- **2019ರಲ್ಲಿ 720 ಮೆಗಾವ್ಯಾಟ್ ಯೋಜನೆ ಉದ್ಘಾಟನೆ**

ಒಟ್ಟು ನಾಲ್ಕು ಯೋಜನೆ

ದ್ವಿಪಕ್ಷೀಯ ಸಹಕಾರದ ನಾಲ್ಕು ಜಲವಿದ್ಯುತ್ ಯೋಜನೆಗಳು (336 ಮೆಗಾವ್ಯಾಟ್ ಚುಖಾ ಎಚ್‌ಇಪಿ, 60 ಮೆಗಾವ್ಯಾಟ್ ಕುರಿಚು ಎಚ್‌ಇಪಿ, 1,020 ಮೆಗಾವ್ಯಾಟ್ ತಾಲಾ ಹೆಚ್‌ಇಪಿ ಮತ್ತು 720 ಮೆಗಾವ್ಯಾಟ್ ಮಂಗ್‌ಡೆಚು ಎಚ್‌ಇಪಿ) ಒಟ್ಟು 2,100 ಮೆಗಾವ್ಯಾಟ್, ಭೂತಾನ್‌ನಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿವೆ ಎಂದು ಎಂಇಎ ತಿಳಿಸಿದೆ.

ಹುರಿಯತ್ ಕಾನ್ಫರೆನ್ಸ್ ತೊರೆದ ಗೀಲಾನಿ

ಶ್ರೀನಗರ: ಕಾಶ್ಮೀರಿ ಪ್ರತ್ಯೇಕತಾವಾದಿ ನಾಯಕ ಹಾಗೂ ಹುರಿಯತ್ ಕಾನ್ಫರೆನ್ಸ್ ಅಧ್ಯಕ್ಷ ಸೈಯದ್ ಅಲಿ ಗೀಲಾನಿ ಪ್ರತ್ಯೇಕತಾವಾದಿ ಸಂಘಟನೆಯಾದ ಹುರಿಯತ್ ಕಾನ್ಫರೆನ್ಸ್ ರಾಜೀನಾಮೆ ನೀಡಿದ್ದಾರೆ.

ಅಚ್ಚರಿಯ ಬೆಳವಣಿಗೆಯೊಂದರಲ್ಲಿ 90 ವರ್ಷದ ಗೀಲಾನಿ, ಹುರಿಯತ್ ಕಾನ್ಫರೆನ್ಸ್ ಅನ್ನು ತೊರೆಯುವ ನಿರ್ಧಾರವನ್ನು ಪ್ರಕಟಿಸಲು ಸಂಕ್ಷಿಪ್ತ ಆಡಿಯೊ ಸಂದೇಶವೊಂದನ್ನು ಬಿಡುಗಡೆ ಮಾಡಿದ್ದಾರೆ. ಪ್ರಸ್ತುತ ಸನ್ನಿವೇಶಗಳನ್ನು ಪರಿಗಣಿಸಿದ ನಂತರ, ನಾನು ಹುರಿಯತ್ ವೇದಿಕೆಯಿಂದ ಹೊರಬರುವುದಾಗಿ ಘೋಷಿಸುತ್ತಿದ್ದೇನೆ ಎಂದು ಅವರು ಹುರಿಯತ್ ಕಾನ್ಫರೆನ್ಸ್‌ಗೆ ರಾಜೀನಾಮೆ ನೀಡಿದ ಬಗ್ಗೆ ಎರಡು ಪುಟಗಳ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ. ಪಾಕಿಸ್ತಾನ ಪರ ರಾಜಕಾರಣಿ ಗೀಲಾನಿ, ಹುರಿಯತ್ ಕಾನ್ಫರೆನ್ಸ್‌ನ ಕಠಿಣ ಬಣವನ್ನು ಮುನ್ನಡೆಸುತ್ತಿದ್ದರೆ, ಮಧ್ಯಮ ಬಣವನ್ನು ಪಾದ್ರಿ ಮಿರ್ವಾಯಿಜ್ ಉಮರ್ ಫಾರೂಕ್ ನೇತೃತ್ವದಲ್ಲಿ ನಡೆಯುತ್ತಿದೆ. ಪ್ರತ್ಯೇಕತಾವಾದಿ ನಾಯಕರು 2018ರ ಮಾರ್ಚ್‌ನಲ್ಲಿ ಹುರಿಯತ್ ಕಾನ್ಫರೆನ್ಸ್‌ನ ಮುಖ್ಯಸ್ಥರಾಗಿ ಮುಂದುವರಿಯಲು ತೆಹ್ರೀಕ್-ಎ-ಹುರಿಯತ್ ಎಂಬ ಪ್ರತ್ಯೇಕತಾವಾದಿ ಪಕ್ಷದ ಅಧ್ಯಕ್ಷ ಸ್ಥಾನದಿಂದ ಹೊರಬಂದ ನಂತರ, ಅವರ ಆಪ್ತ ಸಹಾಯಕ ಮೊಹಮ್ಮದ್ ಅಶ್ರಫ್ ಸೆಹ್ರಾಯ್ ತೆಹ್ರೀಕ್-ಎ-ಹುರಿಯತ್ (ತೆಇಎಚ್) ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು. ತಮ್ಮ ಮೂಲ ಸಂಘಟನೆಯಾದ ಜಮಾತ್-ಎ-ಇಸ್ಲಾಮಿಯೊಂದಿಗೆ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದ ಗೀಲಾನಿ 2004 ರಲ್ಲಿ ತೆಇಎಚ್ ಅನ್ನು ರಚಿಸಿದ್ದರು.

ಕರೋನಾಗೆ ಭಾರತದ ಮೊದಲ ಲಸಿಕೆ

ಹೈದರಾಬಾದ್: ಕರೋನಾ ವಿರುದ್ಧ ಭಾರತದ ಮೊದಲ ಲಸಿಕೆಯನ್ನು ಒಂದು ಮತ್ತು ಎರಡು ಹಂತದಲ್ಲಿ ಮಾನವ ಕ್ಲಿನಿಕಲ್ ಪ್ರಯೋಗಕ್ಕಾಗಿ ಹೈದರಾಬಾದ್ ಮೂಲದ ಲಸಿಕೆ ತಯಾರಕ ಭಾರತ್ ಬಯೋಟೆಕ್‌ಗೆ ಡ್ರಗ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (ಡಿಸಿಜಿಐ) ಅನುಮತಿ ನೀಡಿದೆ.

ಈ ಔಷಧವನ್ನು ನಗರದ ಜೀನೋಮ್ ವ್ಯಾಲಿಯ ಕಂಪನಿಯ ಬಯೋ-ಸೇಫ್ಟಿ ಲೆವೆಲ್ -3 ಹೈ ಕಂಟೈನ್‌ಮೆಂಟ್ ಸೌಲಭ್ಯದಲ್ಲಿ ಅಭಿವೃದ್ಧಿಪಡಿಸಿ ತಯಾರಿಸಲಾಗಿದೆ. ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ ಲಸಿಕೆಗೆ ಕೋವಾಕ್ಸಿನ್ ಎಂದು ಹೆಸರಿಡಲಾಗಿದೆ. ಇದು ನಿಷ್ಕ್ರಿಯ ಲಸಿಕೆಯಾಗಿದೆ. ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ, ಸಾರ್ಸ್-ಕೋವಿ -2ಅನ್ನು ಪ್ರತ್ಯೇಕಿಸಿ ಕಂಪನಿಗೆ ವರ್ಗಾಯಿಸಿದ ನಂತರ ಇದನ್ನು ಅಭಿವೃದ್ಧಿಪಡಿಸಲಾಗಿದೆ.

ಸುರಕ್ಷತೆ ಮತ್ತು ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ಪ್ರದರ್ಶಿಸುವ ಮೂಲಕ ಕಂಪನಿಯು ಪೂರ್ವಭಾವಿ ಅಧ್ಯಯನಗಳಿಂದ ಉತ್ಪತ್ತಿಯಾದ ಫಲಿತಾಂಶಗಳನ್ನು ಸಲ್ಲಿಸಿದ ನಂತರ ಮಾನವ ಕ್ಲಿನಿಕಲ್ ಪ್ರಯೋಗಗಳಿಗೆ ಡಿಸಿಜಿಐ ಅನುಮತಿ ನೀಡಿದೆ. ಮಾನವ ಕ್ಲಿನಿಕಲ್ ಪ್ರಯೋಗಗಳು ಜುಲೈ 2020 ರಲ್ಲಿ ಭಾರತದಾದ್ಯಂತ ಪ್ರಾರಂಭವಾಗಲಿವೆ.

ಕರೋನಾ ವಿರುದ್ಧ ಭಾರತದ ಮೊದಲ ಸ್ಥಳೀಯ ಲಸಿಕೆ ಕೋವಾಕ್ಸಿನ್ ಅನ್ನು ಘೋಷಿಸಲು ನಾವು ಹೆಮ್ಮೆಪಡುತ್ತೇವೆ. ಐಸಿಎಂಆರ್ ಮತ್ತು ಎನ್‌ಐವಿ ಸಹಯೋಗದೊಂದಿಗೆ ಈ ಲಸಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಭಾರತ್ ಬಯೋಟೆಕ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ಕೃಷ್ಣ ಎಲಾ ತಿಳಿಸಿದ್ದಾರೆ.

ಸ್ಥಳೀಯವಾಗಿ ನಮ್ಮ ತಂತ್ರಜ್ಞಾನಗಳನ್ನು ಬಳಸಿಕೊಂಡು ಔಷಧ ತಯಾರಿಸಲು ನಮ್ಮ ಸಂಶೋಧನೆ ಮತ್ತು ಅಭಿವೃದ್ಧಿ ತಂಡಗಳು ಶ್ರಮಪಟ್ಟಿವೆ ಎಂದು ಕೃಷ್ಣ ಹೇಳಿದ್ದಾರೆ. ಕಂಪನಿಯ ಮಾಧ್ಯಮ ಪ್ರಕಟಣೆಯ ಪ್ರಕಾರ, ಇದು ರಾಷ್ಟ್ರೀಯ ನಿಯಂತ್ರಕ ಪ್ರೋಟೋಕಾಲ್‌ಗಳ ಮೂಲಕ ಸಮಗ್ರ ಪೂರ್ವ-ಕ್ಲಿನಿಕಲ್ ಅಧ್ಯಯನಗಳನ್ನು ಪೂರ್ಣಗೊಳಿಸುವ ಉದ್ದೇಶವನ್ನು ಹೆಚ್ಚಿಸಿದೆ. ಈ ಅಧ್ಯಯನಗಳ ಫಲಿತಾಂಶಗಳು ಸುರಕ್ಷತೆ ಮತ್ತು ಪರಿಣಾಮಕಾರಿ ರೋಗನಿರೋಧಕ ಪ್ರತಿಕ್ರಿಯೆ ಗಳನ್ನು ತೋರಿಸುತ್ತವೆ ಎಂದು ಅದು ಹೇಳಿದೆ.

ಭಾರತ್ ಬಯೋಟೆಕ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಸುಚಿತ್ರ ಎಲಾ ಮಾತನಾಡಿ, ಸಾಂಕ್ರಾಮಿಕ ರೋಗ ಆತಂಕಕಾರಿಯಾಗಿ ಹರಡುತ್ತಿರುವ ಈ ಮುನ್ಸೂಚನೆಯಲ್ಲಿ ನಡೆಯುತ್ತಿರುವ ಸಂಶೋಧನೆ ಮತ್ತು ಪರಿಣತಿಯು ಎಚ್1ಎನ್1 ಸಾಂಕ್ರಾಮಿಕ ರೋಗಕ್ಕೆ ಲಸಿಕೆಯನ್ನು ಯಶಸ್ವಿಯಾಗಿ ತಯಾರಿಸಲು ನಮಗೆ ಸಹಾಯ ಮಾಡಿದೆ ಎಂದಿದ್ದಾರೆ.

ಸಿಎ ಪರೀಕ್ಷೆ ನಡೆಸಬೇಕೆ ಯೋಚಿಸಿ?: ಸುಪ್ರೀಂ

ದೆಹಲಿ: ಕರೋನಾದಿಂದಾಗಿ ಜು.29 ಹಾಗೂ ಆ.16ರ ನಡುವೆ ನಿಗದಿಯಾಗಿದ್ದ ಸಿಎ ಪರೀಕ್ಷೆಯಲ್ಲಿ ಹಾಜರಾಗಲು ಸಾಧ್ಯವಾಗದ ಆಕಾಂಕ್ಷಿಗಳಿಗೆ ಹೊರಗುಳಿಯಿರಿ ಎಂದು ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಗೆ ಸೂಚಿಸಿದೆ. ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ ಮತ್ತು ಸಂಜೀವ್ ಖನ್ನಾ ಅವರನ್ನೂ ಒಳಗೊಂಡ ನ್ಯಾಯಪೀಠ, ಕರೋನಾ ಪರಿಸ್ಥಿತಿ ಸ್ಥಿರವಾಗಿಲ್ಲ ಈ ಸಂದರ್ಭದಲ್ಲಿ ಐಸಿಎಐ ಪರೀಕ್ಷಾ ಕೇಂದ್ರದ ಬದಲಾವಣೆಯ ವಿಷಯಗಳ ಬಗ್ಗೆ ಯೋಚಿಸಬೇಕು ಎಂದಿದೆ. ಅಭ್ಯರ್ಥಿಯು ಆಯ್ಕೆಯಿಂದ ಹೊರಗುಳಿಯದಿದ್ದಲ್ಲಿ ಅಥವಾ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಆಯ್ಕೆಯಿಂದ ಹೊರಗುಳಿದವರಿಗೆ ಒದಗಿಸುವ ಪ್ರಯೋಜನವನ್ನು ಇವರಿಗೂ ನೀಡಬೇಕು ಎಂದು ಕೋರ್ಟ್ ಸೂಚಿಸಿದೆ.ಸಾಂಕ್ರಾಮಿಕ ರೋಗದ ಮಧ್ಯೆ ಪರೀಕ್ಷೆಗಳನ್ನು ನಡೆಸಬೇಕೆ ಬೇಡವೇ ಎಂಬುದರ ಬಗ್ಗೆ ಐಸಿಎಐ ಚಿಂತಿಸಬೇಕು ಎಂದು ಸುಪ್ರೀಂ ಹೇಳಿದೆ.

ಹಾರ್ಲೆ ಡೇವಿಡ್‌ಸನ್ ಬೈಕ್ ಟೆಸ್ಟ್‌ಡ್ರೈವ್ ಮಾಡಿದ ನ್ಯಾಯಮೂರ್ತಿ

ಸಿಜೆಐ ಬೋಬ್ಡೆ ಬೈಕ್ ಖಯಾಲಿ!

ದೆಹಲಿ: ಮುಖ್ಯ ನ್ಯಾಯಮೂರ್ತಿ ಶರದ್ ಅರವಿಂದ್ ಬೋಬ್ಡೆ ಅವರು ಮೋಟಾರ್ ಸೈಕಲ್‌ಗಳ ಮೇಲೆ ತಮಗೂ ಒಲವಿದೆ ಎಂಬುದುದನ್ನು ಮರೆಮಾಚದೆ ಬಹಿರಂಗಪಡಿಸಿದ್ದಾರೆ. ನ್ಯಾಯಮೂರ್ತಿ ಅವರು ನಾಗ್ಪುರ ಹೆದ್ದಾರಿಯಲ್ಲಿ ಹಾರ್ಲೆ ಡೇವಿಡ್‌ಸನ್ ಬೈಕ್‌ನ ಟೆಸ್ಟ್ ಡ್ರೈವ್ ಮಾಡಿ ಪರಿಶೀಲಿಸುತ್ತಿರುವ ಚಿತ್ರ ಸಾಮಾಜಿಕ ಮಾಧ್ಯಮದಲ್ಲಿ ಭಾರಿ ವೈರಲ್ ಆಗಿದೆ.

ನಾಗ್ಪುರದ ರಾಜ್ ಭವನದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಸಿಜೆಐ ಬೋಬ್ಡೆ ಹಾರ್ಲೆ ಡೇವಿಡ್‌ಸನ್ ಮೋಟಾರ್ ಸೈಕಲ್ ಅನ್ನು ಪರಿಶೀಲಿಸಿದ್ದಾರೆ. 2019ರ ಅಕ್ಟೋಬರ್‌ನಲ್ಲಿ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಳ್ಳುವ ಮೊದಲು ಅವರು ಭಾರತೀಯ ಕಂಪನಿ ರಾಯಲ್ ಎನ್‌ಫೀಲ್ಡ್ ತಯಾರಿಸಿದ ಬುಲೆಟ್ ಸವಾರಿ ಮಾಡುತ್ತಿದ್ದರು ಎಂದು ಸಂದರ್ಶನದಲ್ಲಿ ಬಹಿರಂಗಪಡಿಸಿದ್ದಾರೆ. ನಾನು ಬೈಕುಗಳನ್ನು ಓಡಿಸಲು ಇಷ್ಟಪಡುತ್ತೇನೆ. ನನ್ನ ಬಳಿ ಬುಲೆಟ್ ಇತ್ತು. ಎಂದು ಬೋಬ್ಡೆ ಮೋಟಾರ್ ಸೈಕಲ್‌ಗಳ ಮೇಲಿನ ತಮ್ಮ ವಿಶೇಷ ಆಸಕ್ತಿಯ ಬಗ್ಗೆ ಕೇಳಿದ್ದಾರೆ. ಮುಖ್ಯ ನ್ಯಾಯಮೂರ್ತಿ ಪ್ರಸ್ತುತ ಮಹಾರಾಷ್ಟ್ರ ನಗರದ ತಮ್ಮ ಊರಿನಲ್ಲಿದ್ದಾರೆ. ಅವರು ಹಾರ್ಲೆ ಡೇವಿಡ್‌ಸನ್ ಕಂಪನಿಯ 'ಲಿಮಿಟೆಡ್ ಎಡಿಷನ್ ಸಿವಿಒ 2020' ಹೊಸ ಬೈಕ್ ಮೇಲೆ ಕುಳಿತಿರುವ ಚಿತ್ರಗಳನ್ನು ಟ್ವಿಟರ್‌ನಲ್ಲಿ ಹಂಚಿಕೊಳ್ಳಲಾಗಿದ್ದು, ಅದು ವೈರಲ್ ಆಗಿದೆ. ರಾಷ್ಟ್ರವ್ಯಾಪಿ ಲಾಕ್‌ಡೌನ್ ಹಿನ್ನೆಲೆಯಲ್ಲಿ ಮುಖ್ಯ ನ್ಯಾಯಮೂರ್ತಿಗಳು ಪ್ರಸ್ತುತ ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ವಿಚಾರಣೆ ನಡೆಸುತ್ತಿದ್ದಾರೆ.

ಇಂಗ್ಲೆಂಡ್ ತಂಡಕ್ಕೆ ಬೆನ್‌ಸ್ಟೋಕ್ಸ್ ನಾಯಕ?

ಲಂಡನ್: ಎರಡನೇ ಮಗುವಿನ ನಿರೀಕ್ಷೆಯಲ್ಲಿರುವ ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕ ಜೋ ರೂಟ್ ಮುಂಬರುವ ಪ್ರವಾಸಿ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಯ ಮೊದಲ ಪಂದ್ಯದಿಂದ ಹೊರಗುಳಿದಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ಟಾರ್ ಆಲ್‌ರೌಂಡರ್ ಬೆನ್‌ಸ್ಟೋಕ್ಸ್‌ಗೆ ನಾಯಕತ್ವ ಸಿಗುವ ಲಕ್ಷಣಗಳು ದಟ್ಟವಾಗಿವೆ.

ತಮ್ಮ ಅನುಪಸ್ಥಿತಿಯಲ್ಲಿ ಇಂಗ್ಲೆಂಡ್ ತಂಡವನ್ನು ಮುನ್ನಡೆಸಲು ಬೆನ್ ಸ್ಟೋಕ್ಸ್ ಸೂಕ್ತ ವ್ಯಕ್ತಿ ಎಂದು ಹಾಲಿ ನಾಯಕ ರೂಟ್ ಸಹ ಸ್ಟೋಕ್ಸ್ ಪರವಾಗಿ ಬ್ಯಾಟ್ ಬೀಸಿದ್ದಾರೆ. ಸ್ಟೋಕ್ಸ್ ಸ್ವಾಭಾವಿಕ ನಾಯಕ. ತಂಡದ ಪರ ಅದ್ಭುತ ಕೆಲಸಗಳನ್ನು ಮಾಡಲು ಅವರು ಸಮರ್ಥರಾಗಿದ್ದಾರೆ ಎಂದು ಬಿಬಿಸಿಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಜೋ ರೂಟ್ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಈ ನಡುವೆ ವಿಕೆಟ್‌ಕೀಪರ್ ಬ್ಯಾಟ್ಸ್‌ಮನ್ ಜೋಸ್ ಬಟ್ಲರ್ ಕೂಡ ನಾಯಕತ್ವ ಪಡೆಯುವ ರೇಸ್‌ನಲ್ಲಿ ಇದ್ದರು. ಆದರೆ, ಇದೀಗ ರೂಟ್ ಬೆಂಬಲದೊಂದಿಗೆ ಸ್ಟೋಕ್ಸ್‌ಗೆ ನಾಯಕತ್ವ ಸಿಗುವುದು ಬಹುತೇಕ ಖಾತ್ರಿಯಾದಂತಿದೆ. ಜುಲೈ 8 ರಿಂದ ಇಂಗ್ಲೆಂಡ್ ಮತ್ತು ವೆಸ್ಟ್ ಇಂಡೀಸ್ ನಡುವೆ 3 ಟೆಸ್ಟ್ ಪಂದ್ಯಗಳ ಸರಣಿ ಆರಂಭವಾಗಲಿದೆ.

ಹಫೀಜ್ ವಿರುದ್ಧ ಕ್ರಮವಿಲ್ಲ: ಪಿಸಿಬಿ

ಕರಾಚಿ: ಆಡಳಿತ ಮಂಡಳಿಯ ಅನುಮತಿ ಪಡೆಯದೇ ಖಾಸಗಿ ಆಸ್ಪತ್ರೆಯಲ್ಲಿ ಕೋವಿಡ್ 19 ಪರೀಕ್ಷೆ ಮಾಡಿಸಿ ಅದರ ವರದಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿದ್ದ ಆಲ್‌ರೌಂಡರ್ ಮೊಹಮದ್ ಹಫೀಜ್ ವಿರುದ್ಧ ಯಾವುದೇ ಶಿಸ್ತು ಕ್ರಮಕ್ಕೆ ಮುಂದಾಗಿಲ್ಲ ಎಂದು ಪಾಕಿಸ್ತಾನ ಕ್ರಿಕೆಟ್ ನಿಯಂತ್ರಣ ಮಂಡಳಿ ಸ್ಪಷ್ಟಪಡಿಸಿದೆ.

ಇಂಗ್ಲೆಂಡ್ ಪ್ರವಾಸಕ್ಕೂ ಮುನ್ನ ಪಾಕ್ ಆಟಗಾರರು ಮತ್ತು ಸಿಬ್ಬಂದಿಗಳ ಕರೋನಾ ಪರೀಕ್ಷೆ ನಡೆಸಲಾಗಿತ್ತು. ಇದರಲ್ಲಿ ಹಫೀಜ್ ಸೇರಿದಂತೆ ಹತ್ತು ಆಟಗಾರರ ವರದಿ ಪಾಸಿಟಿವ್ ಬಂದಿತ್ತು. ಬಳಿಕ ಹಫೀಜ್ ವೈಯಕ್ತಿಕವಾಗಿ ಪರೀಕ್ಷೆ ಮಾಡಿಸಿ ನನಗೆ ಕೋವಿಡ್ 19 ನೆಗೆಟಿವ್ ಇದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ವರದಿ ಪೋಸ್ಟ್ ಮಾಡಿದ್ದರು. ಇದರಿಂದ ಪಿಸಿಬಿ ಮುಜುಗರ ಅನುಭವಿಸಿತ್ತು. ಮಂಡಳಿಯ ಮುಖ್ಯಸ್ಥ ವಾಸಿಮ್ ಖಾನ್ ಈ ಬಗ್ಗೆ ಪ್ರತಿಕ್ರಿಯಿಸಿದ್ದು ವೈಯಕ್ತಿಕವಾಗಿ ಪರೀಕ್ಷೆಗೆ ಒಳಪಡುವ ಮುನ್ನ ಮಂಡಳಿಯನ್ನು ಸಂಪರ್ಕಿಸಬೇಕಿತ್ತು. ಆತನ ನಿರ್ಧಾರ ಅಸಮಾಧಾನ ತರಿಸಿದ್ದು, ಶಿಸ್ತುಕ್ರಮ ತೆಗೆದುಕೊಳ್ಳುವ ಬಗ್ಗೆಯೂ ಚಿಂತಿಸಲಾಗುತ್ತಿದೆ ಎಂದಿದ್ದರು. ಆದರೆ ಸದ್ಯ ಆಡಳಿತ ಮಂಡಳಿ ಯಾವುದೇ ಕ್ರಮಕ್ಕೆ ಮುಂದಾಗದೆ ಹಫೀಜ್‌ಗೆ ಬಿಗ್ ರಿಲೀಫ್ ನೀಡಿದೆ.

ದೇಶದ ಹೆಸರನ್ನೇ ತಪ್ಪಾಗಿಸಿದ ಪಾಕ್

ಕರಾಚಿ: ಆಲ್‌ರೌಂಡರ್ ಮೊಹಮದ್ ಹಫೀಜ್ ಅವರ ಕರೋನಾ ಪರೀಕ್ಷೆಯಲ್ಲಿ ಉಂಟಾಗಿದ್ದ ಗೊಂದಲದಿಂದ ಮುಜುಗರಕ್ಕೆ ಒಳಗಾಗಿದ್ದ ಪಾಕಿಸ್ತಾನ ಕ್ರಿಕೆಟ್ ಮಂಡಳಿ, ಇದೀಗ ತನ್ನ ದೇಶದ ಹೆಸರನ್ನೇ ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪಾಗಿ ನಮೂದಿಸಿ ಮತ್ತೊಮ್ಮೆ ಯಡವಟ್ಟು ಮಾಡಿದೆ.

ಟೆಸ್ಟ್ ಮತ್ತು ಟಿ 20 ಸರಣಿಗಾಗಿ ಪಾಕಿಸ್ತಾನ ಕ್ರಿಕೆಟ್ ತಂಡ ಇಂಗ್ಲೆಂಡ್‌ಗೆ ಬಂದಿಳಿದಿದೆ. ಈ ವಿಷಯವನ್ನು ತಿಳಿಸುವ ಭರದಲ್ಲಿ ತನ್ನ ಅಧಿಕೃತ ಟ್ವಿಟ್ಟರ್ ಖಾತೆಯಲ್ಲಿ ತನ್ನ ದೇಶದ ಹೆಸರನ್ನೇ ತಪ್ಪಾಗಿ ಪಿಸಿಬಿ ಬರೆದುಕೊಂಡಿತ್ತು. pakistan ಎಂದು ಬರೆಯುವ ಬದಲಾಗಿ pakiatan ಎಂದು ಟ್ವೀಟ್ ಮಾಡಿ ಯಡವಟ್ಟು ಮಾಡಿತ್ತು. ಇದನ್ನು ಗಮನಿಸಿದ ನೆಟ್ಟಿಗರು ಪಿಸಿಬಿಯನ್ನು ಟ್ರೋಲ್ ಮಾಡಿದ್ದಾರೆ. ಟ್ವೀಟ್ ಮಾಡಿ ಒಂದು ಗಂಟೆ ಬಳಿಕ ತಪ್ಪನ್ನು ಗಮನಿಸಿ ಟ್ವೀಟ್ ಡಿಲೀಟ್ ಮಾಡಿದರೂ, ನೆಟ್ಟಿಗರ ಕಾಮೆಂಟ್‌ಗಳು ಮಾತ್ರ ಮುಂದುವರಿದಿದ್ದವು.

ಸಂಜಯ್ ದೋಬಲ್ ಕರೋನಾಗೆ ಬಲಿ

ದೆಹಲಿ: ಕರೋನಾ ಮಹಾಮಾರಿಗೆ ಡೆಲ್ಲಿ ಮೂಲದ ಕ್ಲಬ್ ಮಟ್ಟದ ಮಾಜಿ ಕ್ರಿಕೆಟರ್ ಸಂಜಯ್ ದೋಬಲ್ ಬಲಿಯಾಗಿದ್ದಾರೆ. ಅವರಿಗೆ 53 ವರ್ಷ ವಯಸ್ಸಾಗಿತ್ತು. ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಡೆಲ್ಲಿ ಅಂಡರ್ 23 ತಂಡದ ಸಿಬ್ಬಂದಿಯಾಗಿಯೂ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದರು.

ಕಳೆದ ವಾರವಷ್ಟೇ ಸಂಜಯ್‌ಗೆ ಕರೋನಾ ಲಕ್ಷಣಗಳು ಗೋಚರಿಸಿದ್ದವು. ಬಳಿಕ ಬಹದುರ್ಗ‌ರ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಪರೀಕ್ಷಿಸಿದಾಗ ವೈರಸ್ ಸೋಂಕಿರುವುದು ದೃಢಪಟ್ಟಿತ್ತು. ಆರೋಗ್ಯದಲ್ಲಿ ಯಾವುದೇ ಚೇತರಿಕೆ ಕಾಣದ ಹಿನ್ನೆಲೆಯಲ್ಲಿ ನಗರದ ದ್ವಾರಕಾ ಆಸ್ಪತ್ರೆಗೆ ಸ್ಥಳಾಂತರಿಸಿ, ಪ್ಲಾಸ್ಮಾ ಚಿಕಿತ್ಸೆಯನ್ನೂ ಕೊಡಿಸಲಾಗಿತ್ತು. ಆದರೆ ಇದ್ಯಾವುದೂ ಅವರ ಆರೋಗ್ಯವನ್ನು ಸಹಜ ಸ್ಥಿತಿಗೆ ತರುವಲ್ಲಿ ಸಹಕರಿಸಲಿಲ್ಲ ಎಂದು ದೆಹಲಿ ಕ್ರಿಕೆಟ್ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ. ಟೀಮ್ ಇಂಡಿಯಾ ಮಾಜಿ ಆರಂಭಿಕ ಆಟಗಾರ ಗೌತಮ್ ಗಂಭೀರ್ ಟ್ವಿಟ್ಟರ್‌ನಲ್ಲಿ ಸಂಜಯ್ ದೋಬಲ್ ಅವರ ಪ್ಲಾಸ್ಮಾ ಚಿಕಿತ್ಸೆಗಾಗಿ ದಾನಿಗಳಲ್ಲಿ ಮನವಿ ಮಾಡಿಕೊಂಡಿದ್ದರು. ಆಮ್ ಆದ್ಮಿ ಪಕ್ಷದ ಶಾಸಕ ದಿಲೀಪ್ ಪಾಂಡೆ ದಾನಿಗಳ ನೆರವಿನಿಂದ ಪ್ಲಾಸ್ಮಾ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ದೋವಲ್ ನಿಧನ ಹೊಂದಿದ್ದಾರೆ. ಏರ್ ಇಂಡಿಯಾದಲ್ಲಿ ನೌಕರರಾಗಿದ್ದ ದೋಬಲ್, ವೀರೇಂದ್ರ ಸೆಹ್ವಾಗ್, ಗೌತಮ್ ಗಂಭೀರ್ ಮತ್ತು ಮಿಥುನ್ ಮನ್ಹಾಸ್ ಅವರಂತೆಯೇ ದೆಹಲಿ ಕ್ರಿಕೆಟ್‌ನಲ್ಲಿ ದೊಡ್ಡ ಹೊಡೆತಗಳ ಮೂಲಕ ಗಮನ ಸೆಳೆಯುತ್ತಿದ್ದರು. ಆದರೆ ರಣಜಿ ಟ್ರೋಫಿಯಲ್ಲಿ ಸ್ಥಾನ ಪಡೆಯಲು ವಿಫಲರಾಗಿದ್ದ ಅವರು ಕಿರಿಯ ಕ್ರಿಕೆಟಿಗರನ್ನು ತರಬೇತಿಗೊಳಿಸುವ ಜವಾಬ್ದಾರಿ ಹೊತ್ತಿದ್ದರು.

ಧೋನಿಗೆ ಬ್ರಾವೋ ಹಾಡಿನ ಉಡುಗೊರೆ

ದೆಹಲಿ: ಐಪಿಎಲ್‌ನ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಸಹ ಆಟಗಾರರಾಗಿರುವ ಟೀಂ ಇಂಡಿಯಾ ಮಾಜಿ ನಾಯಕ ಎಂ.ಎಸ್.ಧೋನಿ ಹಾಗೂ ವೆಸ್ಟ್ ಇಂಡೀಸ್‌ನ ಡ್ವೇನ್ ಬ್ರಾವೋ ಕ್ರಿಕೆಟ್‌ನಾಚೆಗೂ ಉತ್ತಮ ಸ್ನೇಹಿತರಾಗಿದ್ದಾರೆ. ಈ ಸ್ನೇಹಕ್ಕೆ ಉಡುಗೊರೆಯಾಗಿ ಧೋನಿ ಹುಟ್ಟುಹಬ್ಬದ(ಜುಲೈ 7) ಪ್ರಯುಕ್ತ ಬ್ರಾವೋ ಹಾಡಿನ ಟೀಸರ್ ಬಿಡುಗಡೆ ಮಾಡಿದ್ದಾರೆ. ಇದರ ಸಾಹಿತ್ಯ ಮತ್ತು ಗಾಯನ ಎರಡೂ ಬ್ರಾವೋ ಅವರದ್ದೇ ಎಂಬುದು ವಿಶೇಷ.

ಎಂ.ಎಸ್.ಧೋನಿ ನಂಬರ್ 7 ಎಂದು ಆರಂಭವಾಗುವ ಹಾಡಿನ ಸಾಹಿತ್ಯ, 2007ರ ಟಿ 20, ಚಾಂಪಿಯನ್ ಟ್ರೋಫಿ, 2011ರ ವಿಶ್ವ ಚಾಂಪಿಯನ್, ದೇಶಕ್ಕಾಗಿ ಎಲ್ಲ ಟ್ರೋಫಿ ಗೆದ್ದ ಮೊದಲ ನಾಯಕ. ಎಲ್ಲರೂ ಬನ್ನಿ ಹೆಲಿಕಾಪ್ಟರ್ ಸೆಲೆಬ್ರೇಷನ್ ಮಾಡೋಣ.. ಎಂದು ಮುಂದುವರಿಯುತ್ತದೆ. ತಮ್ಮ ಇನ್‌ಸ್ಟಾಗ್ರಾಂ ಖಾತೆ ಮೂಲಕ ಸದ್ಯ ಟೀಸರ್ ಮಾತ್ರ ಬಿಡುಗಡೆ ಮಾಡಿರುವ ಬ್ರಾವೊ ಜುಲೈ 7 ರಂದು ಸಂಪೂರ್ಣ ಹಾಡನ್ನು ಧೋನಿ ಬಿಡುಗಡೆ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ. ಇದೇ ವೇಳೆ ನಿಮ್ಮದೇ ಶೈಲಿಯ ಹೆಲಿಕಾಪ್ಟರ್ ಡಾನ್ಸ್ ಮಾಡಿ ಅದರ ವಿಡಿಯೋ ಕಳುಹಿಸಿ ಎಂದು ಧೋನಿ ಅಭಿಮಾನಿಗಳಿಗೆ ಸವಾಲನ್ನೂ ನೀಡಿದ್ದಾರೆ.

ಸಮಿತಿಯಲ್ಲಿ ಸ್ಥಾನ ಪಡೆದ ಅತ್ಯಂತ ಕಿರಿಯ ವ್ಯಕ್ತಿ | 23ನೇ ವಯಸ್ಸಿಗೆ ತೀರ್ಪುಗಾರಿಕೆ

ಐಸಿಸಿ ಎಲೈಟ್ ಪ್ಯಾನೆಲ್‌ನಲ್ಲಿ ಭಾರತೀಯ ಅಂಪೈರ್

ದುಬೈ: ಭಾರತದ ಯುವ ಅಂಪೈರ್ ನಿತಿನ್ ಮೆನನ್ ವಿಶಿಷ್ಟ ಸಾಧನೆಯ ಮೂಲಕ ವಿಶ್ವ ಕ್ರಿಕೆಟ್‌ನ ಗಮನ ಸೆಳೆದಿದ್ದಾರೆ. 2020-21ನೇ ಆವೃತ್ತಿಯ ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ಎಲೈಟ್ ಅಂಪೈರ್‌ಗಳ ಸಮಿತಿಯಲ್ಲಿ ಸ್ಥಾನ ಪಡೆಯುವ ಮೂಲಕ ಈ ಸಾಧನೆ ಮಾಡಿದ ಅತಿ ಕಿರಿಯ ಅಂಪೈರ್ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಇದಕ್ಕೂ ಮುನ್ನ ಇಂಗ್ಲೆಂಡ್‌ನ ಮೈಕಲ್ ಗಫ್ (40 ವರ್ಷ) ಈ ಸಾಧನೆ ಮಾಡಿದ್ದರು.

ಐಸಿಸಿಯ ವ್ಯವಸ್ಥಾಪಕ ನಿರ್ದೇಶಕ ಜಿಯೊಫ್ ಅಲಾರ್ಡೈಸ್, ಟೀಂ ಇಂಡಿಯಾ ಮಾಜಿ ಆಟಗಾರ ಸಂಜಯ್ ಮಂಜ್ರೇಕರ್, ಮ್ಯಾಚ್ ರೆಫ್ರಿಗಳಾದ ರಂಜನ್ ಮದುಗಲೆ ಹಾಗೂ ಡೇವಿಡ್ ಬೂನ್ ಅವರನ್ನೊಳಗೊಂಡ ಸಮಿತಿ ನಿತಿನ್ ಅವರನ್ನು ಆಯ್ಕೆ ಮಾಡಿದೆ. ಇದುವರೆಗೂ ಮೂರು ಟೆಸ್ಟ್, 24 ಏಕದಿನ ಹಾಗೂ 16 ಟಿ-20 ಕ್ರಿಕೆಟ್ ಪಂದ್ಯಗಳಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ ಅನುಭವವಿರುವ 36 ವರ್ಷ ವಯಸ್ಸಿನ ನಿತಿನ್ ಮೆನನ್, ಇಂಗ್ಲೆಂಡ್‌ನ ನಿಗೆಲ್ ಲಾಂಗ್ ಅವರ ಬದಲು ಎಲೈಟ್ ಸಮಿತಿಯಲ್ಲಿ ಸ್ಥಾನ ಗಳಿಸಿದ್ದಾರೆ. ಈ ಸಮಿತಿಯಲ್ಲಿ ಸ್ಥಾನ ಪಡೆದ ಭಾರತದ ಮೂರನೇ ಅಂಪೈರ್ ಎಂಬುದು ಮತ್ತೊಂದು ವಿಶೇಷ. ಈ ಹಿಂದೆ ಶ್ರೀನಿವಾಸ ವೆಂಕಟರಾಘವನ್ ಹಾಗೂ ಸುಂದರಂ ರವಿ ಅವರು ಎಲೈಟ್ ಸಮಿತಿಯ ಸದ್ಯರಾಗಿ ಕೆಲಸ ಮಾಡಿದ್ದರು. ರವಿ ಅವರನ್ನು ಕಳೆದ ವರ್ಷ ಸಮಿತಿಯಿಂದ ಕೈ ಬಿಡಲಾಗಿತ್ತು. ಈ ಅವಕಾಶದಿಂದ ಸಂತಸಗೊಂಡಿರುವ ನಿತಿನ್, ವಿಶ್ವದ ಪ್ರಮುಖ ಅಂಪೈರ್‌ಗಳು ಹಾಗೂ ಮ್ಯಾಚ್ ರೆಫ್ರಿಗಳ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿರುವುದಕ್ಕೆ ಹೆಚ್ಚು ಸಂತಸವಾಗಿದೆ. ನನ್ನ ಕನಸು ನನಸಾದ ಕ್ಷಣವಿದು ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

> **ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಬೇಕೆಂಬ ಕನಸು ಕಂಡಿದ್ದೆ. ಅದು ಸಾಧ್ಯವಾಗದ ಕಾರಣ, 23ನೇ ವಯಸ್ಸಿನಿಂದಲೇ ಅಂಪೈರ್ ವೃತ್ತಿ ಆರಂಭಿಸಿದ್ದೆ. 13 ವರ್ಷಗಳ ನನ್ನ ಪರಿಶ್ರಮದ ಫಲವಾಗಿ ವಿಶ್ವದ ಪ್ರಮುಖ ಅಂಪೈರ್‌ಗಳು ಮತ್ತು ಮ್ಯಾಚ್ ರೆಫ್ರಿಗಳ ಜೊತೆ ಕೆಲಸ ಮಾಡುವ ಅವಕಾಶ ದೊರೆತಿದೆ.**
>
> – **ನಿತಿನ್ ಮೆನನ್**, ಭಾರತೀಯ ಅಂಪೈರ್

ಕಡಿಮೆ ವಯಸ್ಸಿನಲ್ಲೇ ಸಕ್ರಿಯ ಕ್ರಿಕೆಟ್‌ಗೆ ಗುಡ್ ಬೈ: ಬಹುತೇಕರು ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ 22ರ ಹರೆಯದಲ್ಲಿ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ವಿಮುಖರಾಗಿದ್ದ ನಿತಿನ್, 23ನೇ ವಯಸ್ಸಿನಿಂದಲೇ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮಾನ್ಯತೆ ಹೊಂದಿರುವ ಟೂರ್ನಿಗಳಲ್ಲಿ ಹಿರಿಯ ಅಂಪೈರ್ ಆಗಿ ಕೆಲಸ ಆರಂಭಿಸಿದ್ದರು. ನಿತಿನ್ ಈ ಮೊದಲು ಎಮಿರೇಟ್ಸ್ ಐಸಿಸಿ ಇಂಟರ್‌ನ್ಯಾಷನಲ್ ಅಂಪೈರ್‌ಗಳ ಸಮಿತಿಯ ಸದಸ್ಯರಾಗಿದ್ದರು. ಅವರ ತಂದೆ ನರೇಂದ್ರ ಮೆನನ್ ಸಹ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಅಂಪೈರ್ ಆಗಿ ಕೆಲಸ ಮಾಡಿದ್ದರು.

ಜೆರ್ಸಿಯಲ್ಲಿ ಬ್ಲಾಕ್ ಲೈವ್ಸ್ ಮ್ಯಾಟರ್

ಲಂಡನ್: ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಟೆಸ್ಟ್ ಸರಣಿ ವೇಳೆ ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದ ಆಟಗಾರರು ತಮ್ಮ ಜೆರ್ಸಿಯ ಕಾಲರ್ ಬಳಿ ಬ್ಲ್ಯಾಕ್ ಲೈವ್ಸ್ ಮ್ಯಾಟರ್' ಲೋಗೊ ಪ್ರದರ್ಶಿಸುತ್ತಾ ಕ್ರಿಕೆಟ್ ಆಡಲಿದ್ದಾರೆ. ಇದರೊಂದಿಗೆ ವರ್ಣಬೇಧದ ವಿರುದ್ಧ ವಿಂಡೀಸ್ ಆಟಗಾರರು ವಿಶಿಷ್ಟ ಅಭಿಯಾನ ನಡೆಸಲಿದ್ದಾರೆ. ವೆಸ್ಟ್ ಇಂಡೀಸ್ ನಾಯಕ ಜೇಸನ್ ಹೋಲ್ಡರ್ ಸಹ ವರ್ಣಬೇಧದ ವಿರುದ್ಧ ಧ್ವನಿಗೂಡಿಸಿ, ಇದೊಂದು ಶಿಕ್ಷಾರ್ಹ ಅಪರಾಧವಾಗಬೇಕು ಎಂದು ಆಗ್ರಹಿಸಿದ್ದರು. ಇದರ ಮುಂದುವರಿದ ಭಾಗವಾಗಿ ಇಡೀ ವಿಂಡೀಸ್ ತಂಡವೇ ವರ್ಣಬೇಧದ ವಿರುದ್ಧ ಒಗ್ಗಟ್ಟು ಪ್ರದರ್ಶಿಸುವುದರಲ್ಲಿದೆ. ವರ್ಣಬೇಧದ ವಿರುದ್ಧ ಒಗ್ಗಟ್ಟು ಪ್ರದರ್ಶಿಸೋದು ನಮ್ಮ ಕರ್ತವ್ಯವೆಂದು ನಾವು ಭಾವಿಸಿದ್ದೇವೆ. ಅಲ್ಲದೇ ಈ ಅನಿಷ್ಟ ನೀತಿಯ ವಿರುದ್ಧ ನಾವು ಜಾಗೃತಿ ಮೂಡಿಸಲು ಕೈಜೋಡಿಸಬೇಕಿದೆ ಎಂದು ಹೋಲ್ಡರ್ ಅಭಿಪ್ರಾಯ ಪಟ್ಟಿದ್ದರು. ಅಲಿಶಾ ಹೊಸನ್ನ ಎಂಬ ವಿನ್ಯಾಸಕ ರೂಪಿಸಿರುವ ನೂತನ ಲೋಗೊಗೆ ಇಂಟರ್ ನ್ಯಾಷನಲ್ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಅನುಮೋದನೆ ನೀಡಿದೆ. ಇಂಗ್ಲೆಂಡ್-ವೆಸ್ಟ್ ಇಂಡೀಸ್ ಟೆಸ್ಟ್ ಸರಣಿ ಜುಲೈ 8ರಂದು ಆರಂಭಗೊಳ್ಳಲು ದಿನಾಂಕ ನಿಗದಿಯಾಗಿದೆ.

ಸದ್ಯಕ್ಕಿಲ್ಲ ತರಬೇತಿ ಶಿಬಿರ

ದೆಹಲಿ: ಆಗಸ್ಟ್‌ವರೆಗೂ ಟೀಂ ಇಂಡಿಯಾ ಆಟಗಾರರು ಯಾವುದೇ ತರಬೇತಿ ಶಿಬಿರದಲ್ಲಿ ಭಾಗವಹಿಸುದಿಲ್ಲ ಎಂದು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಸ್ಪಷ್ಟಪಡಿಸಿದ್ದಾರೆ. ಲಾಕ್‌ಡೌನ್ ಸಡಿಲಿಕೆ ಬಳಿಕ ಧರ್ಮಾಶಾಲಾ ಅಥವಾ ಬೆಂಗಳೂರಿನಲ್ಲಿ ತರಬೇತಿ ಶಿಬಿರ? ನಡೆಸಲು ಯೋಜಿಸಲಾಗಿತ್ತು. ಆದರೆ ಕರೋನಾ ತೀವ್ರತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಯೋಜನೆ ಮುಂದೂಡಲು ಬಿಸಿಸಿಐ ನಿರ್ಧರಿಸಿದೆ.

ವರ್ಷಾಂತ್ಯದಲ್ಲಿ ಆಯೋಜನೆಯಾಗಿರುವ ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಸರಣಿಯ ಸಿದ್ಧತೆಗಾಗಿ ಜುಲೈನಲ್ಲಿ ಟೀಂ ಇಂಡಿಯಾ ಆಟಗಾರರ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳುವ ನಿರ್ಧಾರ ಮಾಡಲಾಗಿತ್ತು. ಇದಕ್ಕಾಗಿ ಆಟಗಾರರೂ ಸಹ ಸಜ್ಜಾಗಿದ್ದರು. ಆದರೆ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಆಗಸ್ಟ್‌ಗೆ ಮುನ್ನ ತರಬೇತಿ ಶಿಬಿರ ಅಸಾಧ್ಯ ಎನ್ನುವ ಮೂಲಕ ತರಬೇತಿ ಶಿಬಿರ ಮತ್ತೊಮ್ಮೆ ಲಾಕ್‌ಡೌನ್ ಆಗಿದೆ. ಇದಕ್ಕೂ ಮುನ್ನ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಸಹ, ಯಾವಾಗ ಹೊರಾಂಗಣ ಕ್ರೀಡಾಂಗಣದಲ್ಲಿ ತರಬೇತಿಯನ್ನು ಆರಂಭಿಸುವುದು ಸಂಪೂರ್ಣ ಸುರಕ್ಷಿತ ಎಂಬುದು ಖಾತ್ರಿಯಾಗುತ್ತದೋ ಆ ನಂತರವೇ ತರಬೇತಿ ಆರಂಭವಾಗಲಿದೆ. ಸರ್ಕಾರ ತೆಗೆದುಕೊಳ್ಳುವ ನಿರ್ಧಾರಗಳಿಗೆ ಪೂರಕವಾಗಿಯೇ ಬಿಸಿಸಿಐ ತನ್ನ ನಿರ್ಧಾರಗಳನ್ನು ಕೈಗೊಳ್ಳಲಿದೆ ಎಂದು ತಿಳಿಸಿದ್ದರು.